ಓ.ಎಸ್.ನಂ.446/2017

ಪಿ.ಡಬ್ಲ್ಯು:1

**ದಿನಾಂಕ:12-12-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಸಿ.ವಿ.ಎಸ್., ವಕೀಲರಿಂದಃ**

ದಾವಾ ಆಸ್ತಿಯನ್ನು ಖರೀದಿ ಮಾಡುವ ಮುಂಚೆ ನಮ್ಮ ಹೆಸರಿನಲ್ಲಿ ದಾವಾ ಸ.ನಂ.ನಲ್ಲಿ ಯಾವುದೇ ಆಸ್ತಿ ಇರಲಿಲ್ಲ.ಸಿ.ಎಸ್ ಸಿದ್ದಪ್ಪ ಬಿನ್ ಸಣ್ಣನೀಲಪ್ಪ ರವರಿಗೆ ದಾವಾ ಆಸ್ತಿ ಹೇಗೆ ಬಂದಿತ್ತು ಎಂದು ನಾನು ದಾಖಲೆ ನೋಡಿರುವುದಿಲ್ಲ.ಸಿ.ಎಸ್ ಸಿದ್ದಪ್ಪರವರ ಕುಟುಂಬದ ಸದಸ್ಯರ ವಿವರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸ.ನಂ.12/2 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸ.ನಂ. 12/2 ರಲ್ಲಿ ಸಿ.ಎಸ್ ಸಿದ್ದಪ್ಪರವರಿಗೆ ಸ.ನಂ.12/1 ರ ಪಕ್ಕದಲ್ಲಿ ಜಮೀನು ಇತ್ತು. ಸ.ನಂ.12/2 ರ ಉತ್ತರ ದಿಕ್ಕಿಗೆ ಸ.ನಂ. 12/1 ಇರುತ್ತದೆ. ಸ.ನಂ.12/1 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ಗೊತ್ತಿಲ್ಲ.ದಾವಾ ಸ.ನಂ.12/2 ಪಿ ನಲ್ಲಿ ಒಟ್ಟು 9 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನಾಗಿದ್ದು ಅದರಲ್ಲಿ ಖರಾಬು ಕಳೆದು 8 ಎಕರೆ 38 ಗುಂಟೆ ಸಾಗುವಳಿ ಪ್ರದೇಶವಾಗಿದ್ದು ಮೂಲತಃ ಮೈಲಾರಪ್ಪ ಬಿನ್ ಕರಿಯಪ್ಪರವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೈಲಾರಪ್ಪ ಬಿನ್ ಕರಿಯಪ್ಪ ಮರಣ ಹೊಂದಿದ ನಂತರ ಅವರ ವಾರಸುದಾರರು ನಿಂಗಪ್ಪ ಬಿನ್ ಮೈಲಾರಪ್ಪ ಮತ್ತು ಬೀರಪ್ಪ ಬಿನ್ ಕರಿಯಪ್ಪ ರವರಿಗೆ ತಲಾ 1 ಎಕರೆ 2 ಗುಂಟೆ, ಪೂಜಾರಿ ಮಲ್ಲಪ್ಪ ಬಿನ್ ಮಾಳಪ್ಪ 2 ಎಕರೆ 28 ಗುಂಟೆ , ಮತ್ತು ಸಿ.ಎಸ್ ಸಿದ್ದಪ್ಪ ಬಿನ್ ಸಣ್ಣನೀಲಪ್ಪ ರವರಿಗೆ 1 ಎಕರೆ 30 ಗುಂಟೆ ಯಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದ ಮುಖಾಂತರ ಪೂಜಾರಿ ಮಲ್ಲಪ್ಪ ಬಿನ್ ಮಾಳಪ್ಪ ರವರ ಹಿಸ್ಸೆಗೆ ಬಂದ ಆಸ್ತಿಯನ್ನು ಈ ದಾವೆಯ ಒಂದನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.ದಾವಾ ಆಸ್ತಿಯ ಪೂರ್ವ ದಿಕ್ಕಿಗೆ 1 ನೇ ಪ್ರತಿವಾದಿಯ ಜಮೀನು ಇರುತ್ತದೆ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ಗೊತ್ತಿಲ್ಲ. ನನ್ನ ತಾಯಿ ದಾವಾ ಆಸ್ತಿ

ಖರೀದಿ ಮಾಡುವ ಸಮಯದಲ್ಲಿ ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ 1 ನೇ ಪ್ರತಿವಾದಿಗೆ ಸೇರಿದ ಜಮೀನು ಇತ್ತೋ ಇಲ್ಲವೋ ಗೊತ್ತಿಲ್ಲ.ದಾವಾ ಆಸ್ತಿಯು ನನ್ನ ತಾಯಿ/ವಾದಿ  ಹೆಸರಿಗೆ ಖರೀದಿ ಪತ್ರ ಮಾಡಿಸಿಕೊಂಡ ನಂತರ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ 1 ನೇ ಪ್ರತಿವಾದಿಯ ಆಸ್ತಿ ಇರುವುದು ತಿಳಿದಿರುತ್ತದೆ.

ದಾವಾ ಅಸ್ತಿ ಕ್ರಯಪತ್ರವಾಗುವ ಸಮಯಕ್ಕೆ ನಾನು ಹಾಜರಿರಲಿಲ್ಲ. ಸಿ.ಎಸ್ ಸಿದ್ದಪ್ಪ ಬಿನ್ ಸಣ್ಣನೀಲಪ್ಪ ಮರಣ ಹೊಂದಿರುತ್ತಾರೆ. ದಾವಾ ಆಸ್ತಿಯನ್ನು ನಾನು ಅಳತೆ ಮಾಡಿಸಿರುವುದಿಲ್ಲ.ದಾವಾ ಆಸ್ತಿ ಕ್ರಯಪತ್ರದ ಸಮಯದಲ್ಲಿ ದಾವಾ ಆಸ್ತಿ ಎಲ್ಲಿ ಬರುತ್ತದೆ ಎಂದು ನಕ್ಷೆ ತೋರಿಸಿರುವುದಿಲ್ಲ ಆದರೆ ಅವರು ದಾವಾ ಆಸ್ತಿಯನ್ನು ತೋರಿಸಿದ್ದರು. ಸ.ನಂ.12/2 ರಲ್ಲಿ ನಾನು ಸ್ವಾಧೀನದಲ್ಲಿರುವ ಜಮೀನನ್ನು ಅಳತೆ ಮಾಡಿಸಿದರೆ 1 ಎಕರೆ 8 ಗುಂಟೆ ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 1 ಎಕರೆ 30 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇವೆಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಭೀರಪ್ಪ ಬಿನ್ ನಿಂಗಪ್ಪ ರವರ ಆಸ್ತಿ ಇದೆ ಎಂದರೆ ಸಾಕ್ಷಿಯು ನಾವು ಖರೀದಿಸುವಾಗ ಮೈಲಾರಪ್ಪರವರ ಜಮೀನು ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಈಗ ಯಾರು ಇದ್ದಾರೆ ಎಂದರೆ ಸಾಕ್ಷಿಯು ಅದನ್ನು ಮಾರಾಟ ಮಾಡಿದ್ದಾರೆ ಆದರೆ ಈಗ ಎರಡು ವರ್ಷದಿಂದ ಶೇಖರಪ್ಪ ಎಂಬುವವರು ವ್ಯವಸಾಯ ಮಾಡುತ್ತಿದ್ದಾರೆ  ಎಂದು ನುಡಿಯುತ್ತಾರೆ.  ಈ ದಾವೆ ದಾಖಲಿಸುವ ಸಮಯದಲ್ಲಿ ದಕ್ಷಿಣ ದಿಕ್ಕಿಗೆ ಭೀರಪ್ಪನ ಅಳಿಯ ಚಂದ್ರಪ್ಪ ಎಂಬುವವರು ವ್ಯವಸಾಯ ಮಾಡುತ್ತಿದ್ದರು. ಸದರಿ ಆಸ್ತಿಯು ಭೀರಪ್ಪನ ಹಿಸ್ಸೆಗೆ ಬಂದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯ ದಕ್ಷಿಣ ದಿಕ್ಕಿಗೆ 20 ಗುಂಟೆ ಇದ್ದು ಅದು ಸಿ.ಎಸ್ ಸಿದ್ದಪ್ಪ ಬಿನ್ ಸಣ್ಣನೀಲಪ್ಪ ರವರಿಗೆ ಸೇರಿದ ಜಮೀನು ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಿಂಗಪ್ಪ ಬಿನ್ ಮೈಲಾರಪ್ಪ ಎಂಬುವರರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

1 ನೇ ಪ್ರತಿವಾದಿ ಸ.ನಂ.12/2 ರಲ್ಲಿ ಒಂದೇ ಕಡೆ 2 ಎಕರೆ 28 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಜಮೀನನ್ನು ಹೋಗಿ

ನೋಡಿದರೆ ಯಾರು ಯಾರು ಯಾವ ಯಾವ ದಿಕ್ಕಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ತಿಳಿಯುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಉಳುಮೆ ಮಾಡದ ಕಾರಣ ದಾವಾ ಆಸ್ತಿಯ ಸುತ್ತಮುತ್ತ ಯಾರು ಯಾರು ಎಷ್ಟುಷ್ಟು ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದೇನೆ ಆದರೆ ಯಾರು ಯಾರು ಸುತ್ತಮತ್ತ ಎಷೆಷ್ಟು ಉಳುಮೆ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕ್ರಯಪತ್ರದಲ್ಲಿ ಮತ್ತು ವಾದಿ ಪತ್ರದಲ್ಲಿ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಪೂಜಾರಿ ಮಲ್ಲಯ್ಯನ ಜಮೀನು ಎಂದು ಬರೆದಿದ್ದು ಈಗ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಹನುಮಂತಪ್ಪ ವ್ಯವಸಾಯ ಮಾಡುತ್ತಿದ್ದಾನೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ 1993 ರಿಂದಲೂ ಸ್ವಾಧೀನಾನುಭವದಲ್ಲಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಲಕ್ಕಪ್ಪನ ಜಮೀನು ಇರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ದಾವಾ ದಾಖಲಿಸುವ ಕಾಲಕ್ಕೆ ಮೈಲಾರಪ್ಪ ಜಮೀನು ಹೊಂದಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ ಸ.ನಂ. 12/1 ರಲ್ಲಿ ನನ್ನ ತಾಯಿ ವಾದಿ ಲಕ್ಕಮ್ಮರವರ 2 ಎಕರೆ 7 ಗುಂಟೆ ಜಮೀನು ಇದೆ. ನಾವು ದಾವಾ ಆಸ್ತಿ ಖರೀದಿಸುವ ಸಮಯಕ್ಕೆ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಸಿದ್ದಪ್ಪರವರಿಗೆ ಸೇರಿದ ಆಸ್ತಿ ಇತ್ತು. ಸ.ನಂ.12/1 ಮತ್ತು 12/2 ರ ಜಮೀನನ್ನು ನಾನು ಯಾವತ್ತು ಅಳತೆ ಮಾಡಿಸಿರುವುದಿಲ್ಲ.ಸ.ನಂ.12/1 ಮತ್ತು 12/2 ರ ಜಮೀನಿನ ಬಾಂದ್ ಕಲ್ಲು ಎಲ್ಲಿದೆ ಮತ್ತು ಅಳತೆ ಎಲ್ಲಿಗೆ ಮುಕ್ತಾಯವಾಗುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.